ಕರ್ನಾಟಕ ಸರಕಾರ

ಸಂಖ್ಯೆ:ಹಿಂವಕಇ/ಸಿಬ್ಬಂದಿ/ಸಿಆರ್–21/2016–17

ಜಿಲ್ಲಾ ಅಧಿಕಾರಿಯವರ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಕಲಬುರಗಿ ದಿನಾಂಕ:27–06–2017

# ಪ್ರಕಟಣೆ

ಕಲಬುರಗಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿನ ಖಾಲಿ ಇರುವ ಅಡುಗೆಯವರು ಮತ್ತು ಅಡುಗೆ ಸಹಾಯಕರು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು. ಎಸ್.ಎಸ್.ಎಲ್.ಸಿ ಅಂಕಗಳ ಜ್ಯೇಷ್ಠತೆಯ ಅಧಾರದ ಮೇಲೆ ಪ್ರವರ್ಗವಾರು/ಮೀಸಲಾತಿಯನುಸಾರ ಅಡುಗೆ ತಯಾರಿಕೆ ಪರೀಕ್ಷೆಗೆ ಆಯ್ಕೆಯಾದ 1:3ರ ಅನುಪಾತದಲ್ಲಿ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳ ಮಾತ್ರ ಪ್ರಾಯೋಗಿಕ ಪರೀಕ್ಷೆಯನ್ನು ಈ ಕೆಳಕಂಡಂತೆ ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು–1, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ರವರ ತಿದ್ದುಪಡಿ ಆದೇಶ ಸಂಖ್ಯೆ:ಹಿಂವಕ 90 ಬಿಇಟಿ 2016 (ಭಾ–2) ದಿನಾಂಕ:27–06–2017ರ ಪರಿಷ್ಕೃತ ವೇಳಾಪಟ್ಟಿಯಂತೆ ನಡೆಸಲಾಗುವುದು.

ದಾಖಲಾತಿ ಪರಿಶೀಲನೆಯ ನಂತರ 1:3ರ ಅಭ್ಯರ್ಥಿಗಳ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್ http://www.kalaburagi.nic.in/bcm/ ರಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ಸದರಿ ಪಟ್ಟಿಯಲ್ಲಿ ಹೆಸರಿಸಿರುವ ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳು ಮಾತ್ರ ಈ ಕೆಳಕಂಡ ಮರು ನಿಗಧಿತ ವೇಳಾಪಟ್ಟಿಯಂತೆ ಅಡುಗೆ ತಯಾರಿಕೆ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ. ಈ ಪರೀಕ್ಷೆಗಳಿಗೆ ಹಾಜರಾಗುವಂತೆ ಅಭ್ಯರ್ಥಿಗಳಿಗೆ ಪ್ರತ್ಯೇಕ ಕರೆ ಪತ್ರ (Call Letter) ಇರುವದಿಲ್ಲ.

| ಹುದ್ದೆಗಳ ವಿವರ | ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಗೆ ನಿಗಧಿಪಡಿಸಿದ್ದ ದಿನಾಂಕ | ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಗೆ ಮರು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ | ಸ್ಥಳ |
|---|---|---|---|
| ಅಡುಗೆಯವರು | 28–06–2017 | 03–07–2017 ಬೆಳಗ್ಗೆ.9.30ಗಂಟೆಗೆ | ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಗುಂಡಗುರ್ತಿ ತಾ॥ಚಿತ್ತಾಪೂರ |
| ಅಡುಗೆ ಸಹಾಯಕರು | 29–06–2017 | 04–07–2017 ಬೆಳಗ್ಗೆ.9.30ಗಂಟೆಗೆ | |

1) ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಯ ಪ್ರತಿ.
2) ದಾಖಲಾತಿ ಪರಿಶೀಲನೆ ಹಾಜರಾತಿ ಸೂಚನಾ ಪತ್ರ

**ಸೂಚನೆಗಳು:–**

1) ಅಭ್ಯರ್ಥಿಗಳನ್ನು ದಾಖಲಾತಿ ಪರಿಶೀಲನೆ ನಂತರ ಪ್ರಾಯೋಗಿಕ ಪರೀಕ್ಷೆಗೆ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜ್ಯೇಷ್ಠತೆಯ ಅಧಾರದ ಮೇಲೆ ಪ್ರವರ್ಗವಾರು/ ಮೀಸಲಾತಿಯನುಸಾರ 1:3ರ ಅನುಪಾತದಲ್ಲಿ ಆಹ್ವಾನಿಸಲಾಗಿದೆ.
2) ಇದು ಪ್ರಾಯೋಗಿಕ ಪರೀಕ್ಷೆ ಹಾಜರಾತಿ ಪತ್ರವಾಗಿದ್ದು, ಇದರ ಆಧಾರದ ಮೇಲೆ ಅಭ್ಯರ್ಥಿಯು ಹುದ್ದೆಯನ್ನು ಕೋರುವ ಹಕ್ಕು ಹೊಂದಿರುವದಿಲ್ಲ. ಹುದ್ದೆಗಳ ನೇಮಕಾತಿಯು ಅಭ್ಯರ್ಥಿಯು ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಯಲ್ಲಿ ಹೊಂದುವ ಅರ್ಹತೆ ಮತ್ತು ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಠತೆಯನ್ನು ಆಧರಿಸಿರುತ್ತದೆ.
3) ಪ್ರಾಯೋಗಿಕ ಪರೀಕ್ಷೆಗೆ ಹಾಜರಾತಿ ಪತ್ರವನ್ನು ಮತ್ತೊಮ್ಮೆ ಕಳುಹಿಸಲಾಗುವುದಿಲ್ಲ. ನಿಗಧಿಪಡಿಸಿದ ದಿನಾಂಕದಂದು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.
4) ಅಡುಗೆ ತಯಾರಿಕೆ ಪ್ರಾಯೋಗಿಕ ಪರೀಕ್ಷೆಯಗೆ ಹಾಜರಾಗಲು ಪ್ರಯಾಣ/ದಿನಭತ್ಯೆ ನೀಡಲಾಗುವುದಿಲ್ಲ.
5) ನೇಮಕಾತಿ ಬಗ್ಗೆ ಯಾವುದೇ ರೀತಿಯ ಅನಧಿಕೃತ ಚಟುವಟಿಕೆಗಳಿಗೆ ಅಸ್ಪದವಿರುವುದಿಲ್ಲ. ಈ ರೀತಿ ಪ್ರಯತ್ನಿಸುವವರ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.
6) **ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಈ ಕಛೇರಿಗೆ ಅಥವಾ ದೂರವಾಣಿ ಸಂಖ್ಯೆ.9448306066 ಮತ್ತು 9036794239 ಕ್ಕೆ ಸಂರ್ಪಕಿಸಿ ತಿಳಿದುಕೊಳ್ಳತಕ್ಕದ್ದು.**

ಸಹಿ/-
ಜಿಲ್ಲಾ ಅಧಿಕಾರಿಗಳು
ಮತ್ತು ಸದಸ್ಯ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಕಲಬುರಗಿ